# ಕರ್ನಾಟಕ ಲೋಕಾಯುಕ್ತ

1) ಸಂಖ್ಯೆ:ಕಂಪ್ಲೆಂಟ್\ಉಪಲೋಕ್\ಬಿಡಿ\2872\2016\ಉನಿವಿ-4 &
2) ಸಂಖ್ಯೆ:ಕಂಪ್ಲೆಂಟ್\ಉಪಲೋಕ್\ಬಿಡಿ\2853\2016\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:08/02/2019

## ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕ್ ಚಿಕ್ಕತಿರುಪತಿ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದ 1) ಪೇಷ್ಕಾರ್ ಶ್ರೀಮತಿ.ಜಿ.ಪದ್ಮಾವತಿ, 2) ಕರ ವಸೂಲಿಗಾರರಾದ ಶ್ರೀ.ಜಿ.ಗೋವಿಂದಪ್ಪ, 3)ಡಿ-ವರ್ಗ ನೌಕರರಾದ ಶ್ರೀ.ಜಿ.ವೆಂಕಟೇಶ, 4) ಪ್ರಧಾನ ಅರ್ಚಕರಾಗಿದ್ದ ಶ್ರೀ.ಜಿ.ನರಸಿಂಹಮೂರ್ತಿ [ಪ್ರಸ್ತುತ ನಿವೃತ್ತ], 5) ಡೋಳು ಭಜಂತ್ರಿಯಾದ ಶ್ರೀ.ಜಿ.ತ್ಯಾಗರಾಜು, 6) ಮುಜರಾಯಿ ಇಲಾಖೆಯ ತಹಶೀಲ್ದಾರರಾಗಿದ್ದ ಶ್ರೀ.ಸೋಮಶೇಖರ್ ಮತ್ತು 7) ಪೇಷ್ಕಾರಾಗಿದ್ದ ಶ್ರೀ.ಎ.ರಾಜು [ಪ್ರಸ್ತುತ ನಿವೃತ್ತ] ರವರುಗಳ ವಿರುದ್ಧದ ದುರ್ನಡತೆ \ ಕರ್ತವ್ಯ ಲೋಪದ ಬಗ್ಗೆ.

******

ಬೆಂಗಳೂರು ಯಲಹಂಕ ಉಪನಗರ ಬಿ-ಸೆಕ್ಟರ್ 9ನೇ ಬಿ ಮುಖ್ಯ ರಸ್ತೆ #553ರ ನಿವಾಸಿಯಾದ ಶ್ರೀ.ಟಿ.ಜಿ.ಕೃಷ್ಣಪ್ಪ ಬಿನ್ ಲೇಟ್.ಗೋವಿಂದಪ್ಪ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕ್ ಚಿಕ್ಕತಿರುಪತಿ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದ 1)ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಶ್ರೀ.ಬಿ.ವಿ.ಹಿರೇಮಠ [ಪ್ರಸ್ತುತ ನಿಧನ], 2) ಪೇಷ್ಕಾರ್ ಶ್ರೀಮತಿ.ಜಿ.ಪದ್ಮಾವತಿ, 3) ಕರ ವಸೂಲಿಗಾರರಾದ ಶ್ರೀ.ಗೋವಿಂದಪ್ಪ, 4) ಡಿ-ವರ್ಗ ನೌಕರರಾದ ಶ್ರೀ.ಜಿ.ವೆಂಕಟೇಶ, 5) ಪ್ರಧಾನ ಅರ್ಚಕರಾಗಿದ್ದ ಶ್ರೀ.ಜಿ.ನರಸಿಂಹಮೂರ್ತಿ [ಪ್ರಸ್ತುತ ನಿವೃತ್ತ], 6) ಡೋಳು ಭಜಂತ್ರಿಯಾದ ಶ್ರೀ.ತ್ಯಾಗರಾಜು, 7)ಮುಜರಾಯಿ ಇಲಾಖೆಯ ತಹಶೀಲ್ದಾರರಾಗಿದ್ದ ಶ್ರೀ.ಸೋಮಶೇಖರ್ ಮತ್ತು 8) ಕೋಲಾರ ಉಪವಿಭಾಗದ ಸಹಾಯಕ ಆಯುಕ್ತರು (ಇನ್ನು ಮುಂದೆ, ಎರಡೂ ದೂರುಗಳಲ್ಲಿನ '1 ರಿಂದ 8ನೇ ಎದುರುದಾರರು' ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

1) **ದೂರು ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಬಿಡಿ/2872/2016ರ ಆಪಾದನೆಗಳು –**

ಮಾಲೂರು ತಾಲ್ಲೂಕ್ ಲಕ್ಕೂರು ಹೋಬಳಿ ಚಿಕ್ಕತಿರುಪತಿ ಗ್ರಾಮದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನವು ಹಿಂದು ಧಾರ್ಮಿಕ ದತ್ತಿ ಇಲಾಖೆಯ ಅಧೀನದಲ್ಲಿರುವ ದೇವಸ್ಥಾನವಾಗಿದ್ದು, ಸದರಿ ದೇವಸ್ಥಾನಕ್ಕೆ ಎಲ್ಲಾ ಮೂಲಗಳಿಂದ ಬರುವ ಹಣ ಕೆನರಾ ಬ್ಯಾಂಕ್, ಚಿಕ್ಕತಿರುಪತಿ ಶಾಖೆಯ ಖಾತೆ ಸಂಖ್ಯೆ:082310100572ಗೆ ಜಮಾ ಆಗುತ್ತದೆ. ಪ್ರತಿ ವರ್ಷ ಮಾರ್ಚ್ ಅಥವಾ ಏಪ್ರಿಲ್ ತಿಂಗಳಿನಲ್ಲಿ ಜರುಗುವ ಚೈತ್ರ ಮಾಸ ಜಾತ್ರೆಯ ಖರ್ಚಿಗೆಂದು ದೇವಸ್ಥಾನದ ನಿಧಿಯಿಂದ ಕಾರ್ಯನಿರ್ವಹಣಾಧಿಕಾರಿಗಳು ಅಥವಾ ಪೇಷ್ಕಾರ್, ಕರ ವಸೂಲಿಗಾರರು, ಸರ್ಕಾರಿ ಜವಾನ ರವರ ಹೆಸರಿನಲ್ಲಿ ಹಲವು ವರ್ಷಗಳಿಂದ ದೇವಸ್ಥಾನದ ನಿಧಿಯಿಂದ ಹೆಚ್ಚುವರಿ ಮೊತ್ತವನ್ನು ತೆಗೆದುಕೊಂಡ ಬಗ್ಗೆ ಅನುಮಾನಗಳು ಹುಟ್ಟಿಕೊಂಡಾಗ ಮಾಹಿತಿ ತಿಳಿಯಲು 2007 ರಿಂದ 2016 ರವರೆಗಿನ ಖರ್ಚು–ವೆಚ್ಚದ ಮಾಹಿತಿಯನ್ನು ಕೇಳಿದ್ದು, ಕಾರ್ಯನಿರ್ವಹಣಾಧಿಕಾರಿಗಳು ದಿನಾಂಕ:02/10/16ರಂದು ನೀಡಿರುವ ನಾಲ್ಕು ವರ್ಷಗಳ ಮಾಹಿತಿಯನ್ನು ಪರಿಶೀಲಿಸಲಾಗಿ, ಕೇವಲ ₹98,000/– ಖರ್ಚಾಗಿವೆಯೆಂದು ಕಂಡು ಬಂದಿದೆ. ಆದರೆ, ಸದರಿಯವರು ನೀಡಿರುವ ನಾಲ್ಕು ವರ್ಷಗಳ ಹಳೆಯ ಮಾಹಿತಿ ಪ್ರಕಾರ ₹12,75,000/–ಗಳು ದೇವಸ್ಥಾನದ ನಿಧಿಯಿಂದ ಖರ್ಚಾಗಿದೆಯೆಂದು ಹೇಳಿದ್ದಾರೆ.

2) **ದೂರು ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಬಿಡಿ/2853/2016ರ ಆಪಾದನೆಗಳು:–**

ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿಯಾದ 1ನೇ ಎದುರುದಾರರು ದಿನಾಂಕ:09/07/15ರಂದು ನೀಡಿದ ಮಾಹಿತಿ ಪ್ರಕಾರ ದೇವಾಲಯದ ಸುತ್ತಲೂ ಗ್ರಿಲ್ ಮಾದರಿಯ ಕಾಂಪೌಂಡ್ ಗೋಡೆ ಕಾಮಗಾರಿ ನಿರ್ವಹಿಸಲು ಕಾರ್ಯಪಾಲಕ ಅಭಿಯಂತರರು, ಕೋಲಾರ ವಿಭಾಗ ರವರಿಗೆ ಚೆಕ್ ಸಂಖ್ಯೆ:427800ರಲ್ಲಿ ₹1ಲಕ್ಷಗಳನ್ನು ನೀಡಿರುವುದಾಗಿ ತಿಳಿಸಿದ್ದಾರೆ. ಆದರೆ, ಅದೇ ಕಾಮಗಾರಿ ನಿರ್ವಹಣೆಗೆ ಚೆಕ್ ಸಂಖ್ಯೆ:420853ರಲ್ಲಿ ₹1,74,824/–ಗಳನ್ನು ಗುತ್ತಿಗೆದಾರರಾದ ಶ್ರೀ.ಜಗದೀಶ್ ರವರಿಗೆ ನೀಡಲಾಗಿದೆಯೆಂದು 1ನೇ ಎದುರುದಾರರು ದಿನಾಂಕ:26/06/15ರಂದು ನೀಡಿದ ಮಾಹಿತಿಯಲ್ಲಿ ತಿಳಿಸಿದ್ದಾರೆ. ಆ ಹಣವನ್ನು ದೂರಿನ ಎದುರುದಾರರೆಲ್ಲಾ ತಮ್ಮ ತಮ್ಮಲ್ಲಿ ಹಂಚಿಕೊಂಡಿದ್ದಾರೆ. ಮುಂದುವರೆದು, 5ನೇ ಎದುರುದಾರರು ಜುಲೈ, 2015ರಲ್ಲಿ ದೇವಸ್ಥಾನದ ಅರ್ಚಕ ವೃತ್ತಿಯಿಂದ ಸ್ವಯಂ ನಿವೃತ್ತಿ ಪಡೆದಿದ್ದರೂ, ಈಗಲೂ ಕೂಡ ಅನಧಿಕೃತವಾಗಿ ಅರ್ಚಕ ವೃತ್ತಿಯನ್ನು ಮುಂದುವರೆಸಿದ್ದಾರೆಂದು ಹೇಳಿದ್ದಾರೆ.

3. ದೂರುಗಳಲ್ಲಿ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ, ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ಆದೇಶಿಸಲಾಗಿ, ಉಪ ನಿಯಂತ್ರಕರು, ಲೆಕ್ಕಪತ್ರ (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರು ತಮ್ಮ ತನಿಖಾ ವರದಿಯಲ್ಲಿ –

BD/2872/16



ದೇವಸ್ಥಾನದ ಅಭಿವೃದ್ಧಿ ಕಾಮಗಾರಿಗಳಿಗೆ ಮತ್ತು ಅರ್ಚಕರಿಗೆ ನೀಡುವ ವೇತನವನ್ನು ಚೆಕ್‌ಗಳ ಮುಖಾಂತರವೇ ಪಾವತಿಸಿರುವುದರಿಂದ ಯಾವುದೇ ರೀತಿಯ ಅವ್ಯವಹಾರ ಕಂಡು ಬಂದಿಲ್ಲ. ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿಯಾದ ಶ್ರೀ.ಬಿ.ವಿ.ಹಿರೇಮಠ (ದೂರು ಸಂಖ್ಯೆ:2853/2016ರ 1ನೇ ಎದುರುದಾರರು) ರವರು ದಿನಾಂಕ:17/03/17ರಂದು ನಿಧನ ಹೊಂದಿರುವುದರಿಂದ, ಸದರಿಯವರ ಮೇಲೆ ಯಾವುದೇ ತನಿಖೆ ಕೈಗೊಳ್ಳಲು ನಿಯಮಗಳಲ್ಲಿ ಅವಕಾಶವಿಲ್ಲ. ಉಳಿದ ಎದುರುದಾರರ ವಿರುದ್ಧ ಮಾಡಲಾದ ಆಪಾದನೆಗಳು ತನಿಖೆಯಲ್ಲಿ ಸಾಬೀತಾಗಿಲ್ಲವೆಂದು ಹೇಳಿದ್ದಾರೆ.

4. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ –

**1) ದೂರು ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಬಿಡಿ/2872/2016ರಲ್ಲಿ –**

ಅ) ಶ್ರೀಮತಿ.ಜಿ.ಪದ್ಮಾವತಿ – 1ನೇ ಎದುರುದಾರರು ದಿ:20/06/18ರ ಪತ್ರದೊಂದಿಗೆ ದಿನಾಂಕ:18/03/17ರಂದು ಈ ಸಂಸ್ಥೆಯ ತಾಂತ್ರಿಕ ವಿಭಾಗಕ್ಕೆ ಕಳುಹಿಸಿದ ಪತ್ರದ ಪ್ರತಿಯಲ್ಲಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ.ಬಿ.ವಿ.ಹಿರೇಮಠ ರವರು ದಿನಾಂಕ:17/03/17ರಂದು ನಿಧನ ಹೊಂದಿರುತ್ತಾರೆಂದು ತಿಳಿಸುತ್ತಾ ತಾವು ಅಕ್ಟೋಬರ್, 2010ರಲ್ಲಿ ಚಿಕ್ಕತಿರುಪತಿ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನಕ್ಕೆ ವರ್ಗಾವಣೆಯಾಗಿ ಬಂದು ಕಾರ್ಯನಿರ್ವಹಿಸುತ್ತಿದ್ದು, ದೇವಸ್ಥಾನದ ನಿಧಿಯಿಂದ ತಮ್ಮ ಸ್ವಂತ ಹೆಸರಿನಲ್ಲಿ ಹಣ ಸೆಳೆಯಲು ಅವಕಾಶವಿಲ್ಲ, ದೇವಸ್ಥಾನದ ನಿಧಿಯಿಂದ ಖರ್ಚನ್ನು ಭರಿಸಲು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಡತವನ್ನು ಮಂಡಿಸಲಾಗಿದೆ. ದೇವಾಲಯದ ಕಾಂಪೌಂಡ್ ಕಾಮಗಾರಿ ತಮ್ಮ ಕರ್ತವ್ಯದ ಅವಧಿಯಲ್ಲಿ ಆಗಿಲ್ಲ ಮತ್ತು ದೇವಾಲಯದ ಅತಿಥಿ ಗೃಹದ ಮುಂಭಾಗದಲ್ಲಿ ನಡೆಯುತ್ತಿರುವ ಕಾಮಗಾರಿಗೆ ಯಾವುದೇ ಮೊತ್ತವನ್ನು ಮುಂಗಡವಾಗಿ ನೀಡಿಲ್ಲ. ದೇವಾಲಯದಲ್ಲಿ ನಡೆಯುತ್ತಿರುವ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಕೋಲಾರ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ನಡೆಯುತ್ತಿದೆಯೆಂದು ಹೇಳಿದ್ದಾರೆ.

ಆ) ಶ್ರೀ.ಜಿ.ಗೋವಿಂದಪ್ಪ ಮತ್ತು ಶ್ರೀ.ಜಿ.ವೆಂಕಟೇಶ್ ಕ್ರಮವಾಗಿ, ಎರಡು (2) ಮತ್ತು 3ನೇ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ, ತಾವು ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಗಳ ಕೈಕೆಳಗೆ ಕಾರ್ಯನಿರ್ವಹಿಸುವರಾಗಿದ್ದು, ದೂರಿನ ಆಪಾದನೆಗಳಿಗೂ ಮತ್ತು ತಮಗೂ ಯಾವುದೇ ಸಂಬಂಧ ಇಲ್ಲವೆಂದು ಹೇಳಿದ್ದಾರೆ.

ಇ) ಶ್ರೀ.ಜಿ.ನರಸಿಂಹಮೂರ್ತಿ – ನಾಲ್ಕನೇ (4ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ತಾವು ದಿನಾಂಕ:08/07/1969 ರಿಂದ ದೇವಸ್ಥಾನದ ವಂಶಪಾರಂಪರ್ಯ ಅರ್ಚಕರಾಗಿ ಕಾರ್ಯನಿರ್ವಹಿಸಿ, ದಿನಾಂಕ:29/06/15 ರಂದು ನಿವೃತ್ತರಾಗಿದ್ದು, ದೇವಾಲಯದ ಆಯವ್ಯಯ ಶ್ರೇಣಿಯಲ್ಲಿ

ನಿಗಧಿಪಡಿಸಿರುವ ಪೂಜೆಗಾಗಿ ಚೆಕ್ ಮೂಲಕ ಹಣ ಪಡೆದಿದ್ದು, ದೂರಿನಲ್ಲಿ ಆಪಾದಿಸಿದಂತೆ ಯಾವುದೇ ಅವ್ಯವಹಾರಗಳು ನಡೆದಿಲ್ಲವೆಂದು ಹೇಳಿದ್ದಾರೆ.

ಈ) ಶ್ರೀ.ತ್ಯಾಗರಾಜು (5ನೇ ಎದುರುದಾರರು) ಮತ್ತು ಕೋಲಾರ ಉಪವಿಭಾಗದ ಸಹಾಯಕ ಆಯುಕ್ತರು (7ನೇ ಎದುರುದಾರರು) ಆಕ್ಷೇಪಣೆಗಳನ್ನು ಸಲ್ಲಿಸಿಲ್ಲ.

ಉ) ಶ್ರೀ.ಆರ್.ಸೋಮಶೇಖರಯ್ಯ – ಆರನೇ (6ನೇ) ಎದುರುದಾರರು ತಮ್ಮ ದಿನಾಂಕ:19/01/18ರ ಆಕ್ಷೇಪಣೆಯಲ್ಲಿ, ತಾವು ಫೆಬ್ರವರಿ, 2013 ರಿಂದ ಮುಜರಾಯಿ ತಹಶೀಲ್ದಾರರಾಗಿ ಕಾರ್ಯನಿರ್ವಹಿಸುತ್ತಿದ್ದು, ದೂರಿನಲ್ಲಿ 2007 ರಿಂದ ಎಂದು ಆಪಾದಿಸಿದ್ದಾರೆ. ದೇವಾಲಯದಲ್ಲಿ ತಹಶೀಲ್ದಾರ್ ದರ್ಜೆಯ (ಬಿ–ಗ್ರೂಪ್) ಕಾರ್ಯನಿರ್ವಾಹಕ ಅಧಿಕಾರಿಗಳಿದ್ದು, ಹಣಕಾಸು ವ್ಯವಹಾರ ನಿರ್ವಹಣೆ ಕಾರ್ಯನಿರ್ವಾಹಕ ಅಧಿಕಾರಿಗಳದ್ದಾಗಿದೆ. ಆದರೆ, ದೂರುದಾರರು ತಮ್ಮ ಮೇಲೆ ಆಪಾದನೆ ಮಾಡಿರುವುದು ಸತ್ಯಕ್ಕೆ ದೂರವಾಗಿದೆ. ಈಗಾಗಲೇ ಜಿಲ್ಲಾಧಿಕಾರಿಗಳಿಗೆ 4 ದೂರು ಅರ್ಜಿಗಳನ್ನು ನೀಡಿದ್ದು, ಜಿಲ್ಲಾಧಿಕಾರಿಗಳು ತನಿಖೆ ನಡೆಸಿ ಕ್ರಮ ಕೈಗೊಂಡು ವರದಿ ಸಲ್ಲಿಸಲು ಕೋಲಾರ ಉಪ ವಿಭಾಗದ ಸಹಾಯಕ ಆಯುಕ್ತರು ಮತ್ತು ದೇವಸ್ಥಾನದ ಆಡಳಿತಾಧಿಕಾರಿಗಳಿಗೆ ಪತ್ರ ಕಳುಹಿಸಿರುವುದಾಗಿ ಹೇಳಿದ್ದಾರೆ.

2) **ದೂರು** ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ/2853/2016ರಲ್ಲಿ –

ಅ) !ನೇ ಎದುರುದಾರರು (ಶ್ರೀ.ಬಿ.ವಿ.ಹಿರೇಮಠ) ಮೃತಪಟ್ಟಿದ್ದಾರೆ.

ಆ) ಶ್ರೀಮತಿ.ಪದ್ಮಾವತಿ – 2ನೇ ಎದುರುದಾರರು ತಮ್ಮ ಪತ್ರದಲ್ಲಿ, !ನೇ ಎದುರುದಾರರು ದಿನಾಂಕ:17/03/17ರಂದು ನಿಧನ ಹೊಂದಿರುವುದಾಗಿ ಹೇಳಿದ್ದಾರೆ.

ಇ) ಶ್ರೀ.ಜಿ.ಗೋವಿಂದಪ್ಪ – 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ದೂರಿನ ಆಪಾದನೆಗಳನ್ನು ಅಲ್ಲಗಳೆದಿದ್ದಾರೆ.

ಈ) ಶ್ರೀ.ಜಿ.ವೆಂಕಟೇಶ್ – 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ದೂರಿನ ಆಪಾದನೆಗಳನ್ನು ಅಲ್ಲಗಳೆದಿದ್ದಾರೆ.

ಉ) ಶ್ರೀ.ಜಿ.ನರಸಿಂಹಮೂರ್ತಿ – 5ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

ಊ) ಶ್ರೀ.ತ್ಯಾಗರಾಜು – ಆರನೇ (6ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ಚೈತ್ರ ಮಾಸ ಮತ್ತು ಶ್ರಾವಣ ಮಾಸಗಳಲ್ಲಿ ದೇವಾಲಯಕ್ಕೆ ಅಧಿಕ ಭಕ್ತರು ಆಗಮಿಸುವುದರಿಂದ, ಭಕ್ತಾದಿಗಳ ಮುಡಿ ತೆಗೆಯುವ ಕಾರ್ಯವನ್ನು ಭಜಂತ್ರಿಯಾದ ತಮಗೆ ನಿಭಾಯಿಸಲು ಕಷ್ಟವಾಗುವುದರಿಂದ ದೇವಸ್ಥಾನದ ವತಿಯಿಂದ ತಾತ್ಕಾಲಿಕ ಸಿಬ್ಬಂದಿ ನೇಮಿಸಿ, ಭಕ್ತಾದಿಗಳಿಗೆ ಅನುಕೂಲ ಮಾಡಿಕೊಡಲಾಗುತ್ತದೆ. ಅವರಿಗೆ ನೀಡಬೇಕಾದ ಭತ್ಯೆಯನ್ನು ಕಾರ್ಯನಿರ್ವಹಣಾ ಅಧಿಕಾರಿಗೆ ಅರ್ಜಿ ನೀಡಿ, ಹಣ ಪಡೆದು,

ತಾತ್ಕಾಲಿಕ ಸಿಬ್ಬಂದಿರವರಿಗೆ ನೀಡಿ, ಸಹಿ ಪಡೆದಿದ್ದು, ದೂರಿನಲ್ಲಿ ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾಗಿವೆಯೆಂದು ಹೇಳಿದ್ದಾರೆ.

ಖ) ಆರ್.ಸೋಮಶೇಖರ್ – ಏಳನೇ (7ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ತಾವು ಫೆಬ್ರವರಿ, 2013 ರಿಂದ ಮುಜರಾಯಿ ತಹಶೀಲ್ದಾರರಾಗಿ ಕಾರ್ಯನಿರ್ವಹಿಸುತ್ತಿದ್ದು, ದೂರಿನಲ್ಲಿ 2007 ರಿಂದ ಎಂದು ಆಪಾದಿಸಿದ್ದಾರೆ. ದೇವಾಲಯದಲ್ಲಿ ತಹಶೀಲ್ದಾರ್ ದರ್ಜೆಯ (ಬಿ–ಗ್ರೂಪ್) ಕಾರ್ಯನಿರ್ವಾಹಕ ಅಧಿಕಾರಿಗಳಿದ್ದು, ಹಣಕಾಸು ವ್ಯವಹಾರ ನಿರ್ವಹಣೆ ಕಾರ್ಯನಿರ್ವಾಹಕ ಅಧಿಕಾರಿಗಳದ್ದಾಗಿದೆ. ಆದರೆ, ದೂರುದಾರರು ತಮ್ಮ ಮೇಲೆ ಆಪಾದನೆ ಮಾಡಿರುವುದು ಸತ್ಯಕ್ಕೆ ದೂರವಾಗಿದೆ. ಈಗಾಗಲೇ ಜಿಲ್ಲಾಧಿಕಾರಿಗಳಿಗೆ 4 ದೂರು ಅರ್ಜಿಗಳನ್ನು ನೀಡಿದ್ದು, ಜಿಲ್ಲಾಧಿಕಾರಿಗಳು ತನಿಖೆ ನಡೆಸಿ ಕ್ರಮ ಕೈಗೊಂಡು ವರದಿ ಸಲ್ಲಿಸಲು ಕೋಲಾರ ಉಪ ವಿಭಾಗದ ಸಹಾಯಕ ಆಯುಕ್ತರು ಮತ್ತು ದೇವಸ್ಥಾನದ ಆಡಳಿತಾಧಿಕಾರಿಗಳಿಗೆ ಪತ್ರ ಕಳುಹಿಸಿದ್ದಾರೆಂದು ಹೇಳಿದ್ದಾರೆ.

ಎ) ಕೋಲಾರ ಉಪವಿಭಾಗದ ಸಹಾಯಕ ಆಯುಕ್ತರು – 8ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

5. ಸದರಿ ಎರಡೂ ದೂರುಗಳಲ್ಲಿನ 7 ಮತ್ತು 8ನೇ ಎದುರುದಾರರಾದ ಕೋಲಾರ ಉಪವಿಭಾಗದ ಸಹಾಯಕ ಆಯುಕ್ತರು ಹಾಗೂ 1ನೇ ಎದುರುದಾರರಾದ ಶ್ರೀ.ಬಿ.ವಿ.ಹಿರೇಮಠ [ಮೃತರು] ರವರುಗಳ ವಿರುದ್ಧದ ನಡವಳಿಯನ್ನು ಕೈಬಿಟ್ಟು ಶ್ರೀ.ಎ.ರಾಜು, ಪೇಷ್ಕಾರ್ ರವರನ್ನು ಸದರಿ ಎರಡೂ ದೂರುಗಳಲ್ಲಿ 7 ಮತ್ತು 8ನೇ ಎದುರುದಾರರನ್ನಾಗಿ ಮುಖಪುಟದಲ್ಲಿ ಸೇರಿಸಿ, ಸದರಿಯವರಿಂದ ದೂರುಗಳಿಗೆ ಆಕ್ಷೇಪಣೆಯನ್ನು ಕೇಳಲಾಗಿ, ಸದರಿಯವರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿನಾಂಕ:07/06/02 ರಿಂದ 03/03/10ರವರೆಗೆ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ಪೇಷ್ಕಾರ್ (ದ್ವಿತೀಯ ದರ್ಜೆ ಸಹಾಯಕ) ಆಗಿ ಕರ್ತವ್ಯ ನಿರ್ವಹಿಸಿದ್ದು, ದೂರಿನಲ್ಲಿ ಹೇಳಿದ ದಿನಾಂಕ:21/03/09ರ ಚೆಕ್ ಸಂಖ್ಯೆ:427561 ಮೊತ್ತ ₹90,000/–ಗಳನ್ನು ದೇವಾಲಯದ ಅಂದಿನ ಕಾರ್ಯನಿರ್ವಾಹಕ ಅಧಿಕಾರಿಯವರು ದೇವಾಲಯದ ವಾರ್ಷಿಕ ಜಾತ್ರೆಯ ಖರ್ಚು–ವೆಚ್ಚಕ್ಕಾಗಿ ಬ್ಯಾಂಕಿನಿಂದ ಹಣ ಡ್ರಾ ಮಾಡುವ ಉದ್ದೇಶದಿಂದ ಹಣ ಡ್ರಾ ಮಾಡುವ ಕಾರ್ಯವನ್ನು ತಮಗೆ ವಹಿಸಿ, ಸದರಿ ಚೆಕನ್ನು ತಮಗೆ ನೀಡಿದ್ದಾರೆ. ಸದರಿ ಚೆಕನ್ನು ದಿನಾಂಕ:21/03/13ರಂದು ಚಿಕ್ಕತಿರುಪತಿ ಶಾಖೆಯ ಕೆನರಾ ಬ್ಯಾಂಕ್‌ಗೆ ನೀಡಿ, ಬ್ಯಾಂಕಿನಿಂದ ₹90,000/– ನಗದನ್ನು ಪಡೆದು, ಅದೇ ದಿನ ಸದರಿ ಮೊಬಲಗನ್ನು ದೇವಾಲಯದ ಕಾರ್ಯಾಲಯದಲ್ಲಿ ಪಾವತಿಸಿದೆ. ಸದರಿ ಚೆಕ್‌ನ ಬಾಬ್ತು ಹಣವನ್ನು ಶ್ರೀ.ರಘು ಎಂಬುವವರು ಪಡೆದಿಲ್ಲ. ಬ್ಯಾಂಕ್‌ನ ಪಾಸ್ ಪುಸ್ತಕದಲ್ಲಿ ಕೈತಪ್ಪಿನಿಂದ ಶ್ರೀ.ಎ.ರಾಜು ಎಂಬ ಹೆಸರಿನ ಬದಲಾಗಿ, ಶ್ರೀ.ಎ.ರಘು ಎಂದು

ನಮೂದಾಗಿದೆ. ಕೆನರಾ ಬ್ಯಾಂಕ್‌ನ ವ್ಯವಸ್ಥಾಪಕರು ದಿನಾಂಕ:16/02/17ರಂದು ಈ ಬಗ್ಗೆ ಪತ್ರ ನೀಡಿ, ಸ್ಪಷ್ಟನೆ ನೀಡಿರುವುದಾಗಿ ಹೇಳಿದ್ದಾರೆ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ದೂರುಗಳಲ್ಲಿನ 1 ರಿಂದ 5 ಮತ್ತು 7/8ನೇ ಎದುರುದಾರರು ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ಕ್ರಮವಾಗಿ, ಪೇಷ್ಕಾರ್, ಕರ ವಸೂಲಿಗಾರರು, ಡಿ–ದರ್ಜೆ ನೌಕರರು, ನಿವೃತ್ತ ಪ್ರಧಾನ ಅರ್ಚಕರು, ಡೋಳು ಭಜಂತ್ರಿ ಮತ್ತು ಪೇಷ್ಕಾರ್‌ಗಳಾಗಿದ್ದು, ಸದರಿಯವರುಗಳ ಹೆಸರಿನಲ್ಲಿ ಈ ಕೆಳಕಂಡಂತೆ ವಿವಿಧ ದಿನಾಂಕಗಳಂದು ಚೆಕ್‌ಗಳ ಮುಖೇನ ಹಣವನ್ನು ದೇವಸ್ಥಾನದ ಬ್ಯಾಂಕ್ ಖಾತೆ (ಕೆನರಾ ಬ್ಯಾಂಕ್, ಚಿಕ್ಕತಿರುಪತಿ ಶಾಖೆ, ಉಳಿತಾಯ ಖಾತೆ ಸಂಖ್ಯೆ:000572) ಯಿಂದ ಪಡೆದಿರುವುದು ಖಾತೆಯ ತಃಖ್ತೆ ಮತ್ತು ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿಗಳು ದೂರುದಾರರಿಗೆ ಕೋಲಾರ ಉಪವಿಭಾಗದ ಸಹಾಯಕ ಆಯುಕ್ತರ ಮೂಲಕ ನೀಡಿದ ಮಾಹಿತಿಯಲ್ಲಿ ಕಂಡು ಬಂದಿದೆ.

| ಕ್ರ. ಸಂ. | ಎದುರುದಾರರುಗಳ ವಿವರ | ದಿನಾಂಕ | ಚೆಕ್ ಸಂಖ್ಯೆ | ಮೊತ್ತ ₹ ಗಳಲ್ಲಿ |
|---|---|---|---|---|
| 1 | 2 | 3 | 4 | 5 |
| 1 | ಶ್ರೀಮತಿ.ಜಿ.ಪದ್ಮಾವತಿ.ಪೇಷ್ಕಾರ್ (ಎರಡೂ ದೂರುಗಳಲ್ಲಿನ ಎದುರುದಾರರು) | 10/05/10 | 423188 | 8908 |
| | | 14/08/10 | 423733 | 41500 |
| | | 04/10/10 | 423671 | 20000 |
| | | 16/12/10 | 423505 | 5000 |
| | | 30/12/10 | 423710 | 5000 |
| | | 31/03/11 | 376539 | 265000 |
| | | 09/07/11 | 376595 | 30000 |
| | | 18/08/11 | 533813 | 28500 |
| | | 21/09/11 | 533827 | 35000 |
| | | 30/11/11 | 533867 | 32471 |
| | | 28/12/11 | 533879 | 10000 |
| | | 03/01/12 | 533883 | 32126 |
| | | 03/01/12 | 533890 | 10000 |
| | | 11/01/12 | 533891 | 100225 |
| | | 02/02/12 | 533899 | 30920 |
| | | 05/03/12 | 428616 | 32315 |
| | | 07/03/12 | 428613 | 425000 |

BD/2872/16



| | | | | |
|---|---|---|---|---|
| | | 11/04/12 | 428628 | 31556 |
| | | 05/05/12 | 428638 | 36400 |
| | | 24/05/12 | 428648 | 1343 |
| | | 06/06/12 | 428651 | 36400 |
| | | 30/06/12 | 428663 | 162496 |
| | | 07/07/12 | 428666 | 36400 |
| | | 18/07/12 | 428676 | 35000 |
| | | 18/07/12 | 428677 | 100000 |
| | | 01/08/12 | 428681 | 36400 |
| | | 25/08/12 | 428690 | 48000 |
| | | 01/09/12 | 425860 | 164285 |
| | | 05/09/12 | 425863 | 48400 |
| | | 10/10/12 | 425888 | 35000 |
| | | 10/10/12 | 425889 | 5550 |
| | | 08/12/12 | 947509 | 48400 |
| | | 17/12/12 | 947519 | 1950 |
| | | 24/12/12 | 947520 | 25000 |
| | | 31/12/12 | 947534 | 25000 |
| | | 31/12/12 | 947527 | 48400 |
| | | 02/02/13 | 947551 | 199440 |
| | | | 947543 | 48400 |
| | | 04/03/13 | 947559 | 130 |
| | | | 947558 | 3632 |
| | | | 947564 | 48400 |
| | | 08/04/13 | 947580 | 431000 |
| | | 03/10/13 | 949968 | 48400 |
| | | 27/01/14 | 950745 | 87415 |
| | | 06/02/14 | 950751 | 48400 |
| | | 01/03/14 | 950780 | 3380 |
| | | | 950773 | 48400 |
| | | 25/03/14 | 950791 | 205000 |
| | | 02/04/14 | 952806 | 2500 |
| | | | 950797 | 48400 |
| | | 09/05/14 | 952828 | 48400 |

| | | | | |
|---|---|---|---|---|
| | | | 952830 | 2500 |
| | | 05/06/14 | 952845 | 2500 |
| | | | 952838 | 48400 |
| | | ಜೂನ್, 2014 | 952871 | 197794 |
| | | ಜುಲೈ, 2014 | 952871 (Repeated) | 2500 |
| | | ಜುಲೈ, 2014 | 952867 | 48400 |
| | | 07/08/14 | 952892 | 9040 |
| | | | 952892 (Repeated) | 2500 |
| | | | 952891 | 48400 |
| | | 06/09/14 | 951903 | 40000 |
| | | | 951910 | 48400 |
| | | 01/10/14 | 952900 | 2500 |
| | | 11/10/14 | 951932 | 48400 |
| | | | 951941 | 2500 |
| | | 06/11/14 | 951956 | 48400 |
| | | | 951963 | 2500 |
| | | 09/12/14 | 951975 | 44900 |
| | | 24/12/14 | 951947 | 20000 |
| | | 12/01/15 | 951998 | 2500 |
| | | | 951991 | 44900 |
| **ಒಟ್ಟು ಮೊತ್ತ** | | | | 3976276 |
| 2 | ಶ್ರೀ.ಟಿ.ಗೋವಿಂದಪ್ಪ, ಕರ ವಸೂಲಿಗಾರರು (ಎರಡೂ ದೂರುಗಳಲ್ಲಿನ ಎದುರುದಾರರು) | 04/01/07 | 809663 | 4570 |
| | | 14/02/07 | 809679 | 3326 |
| | | | 809680 | 833 |
| | | | 809678 | 1372 |
| | | 17/03/07 | 809686 | 2000 |
| | | 28/04/07 | 809698 | 4595 |
| | | | 809699 | 1344 |
| | | 12/06/07 | 804017 | 5016 |
| | | | 804018 | 722 |
| | | 24/06/07 | 804021 | 1250 |
| | | 19/07/07 | 804033 | 4000 |
| | | 24/07/07 | 804035 | 617 |

BD/2872/16



| | | | | |
|---|---|---|---|---|
| | | 14/08/07 | 804046 | 3556 |
| | | | 804047 | 563 |
| | | | 804048 | 1960 |
| | | 18/08/07 | 804049 | 20200 |
| | | 28/10/07 | 804074 | 1936 |
| | | | 804072 | 4004 |
| | | 11/11/07 | 804091 | 4025 |
| | | 01/12/07 | 804093 | 790 |
| | | | 804094 | 1535 |
| | | 08/12/07 | 427107 | 1978 |
| | | 18/12/07 | 427109 | 2576 |
| | | | 427110 | 353 |
| | | 06/01/08 | 427124 | 1550 |
| | | 02/02/08 | 427128 | 732 |
| | | 23/02/08 | 427139 | 652 |
| | | | 427140 | 2377 |
| | | 12/03/08 | 427153 | 663 |
| | | 13/04/08 | 427179 | 1726 |
| | | | 427180 | 374 |
| | | 12/06/08 | 427706 | 1283 |
| | | | 427705 | 1265 |
| | | 21/06/08 | 427708 | 2918 |
| | | 23/06/08 | 427709 | 6000 |
| | | | 427710 | 5000 |
| | | 21/07/08 | 427723 | 2420 |
| | | 07/08/08 | 427738 | 560 |
| | | 20/08/08 | 427743 | 1312 |
| | | | 427744 | 2334 |
| | | | 427745 | 900 |
| | | 06/09/08 | 427741 | 20000 |
| | | 18/09/08 | 427765 | 698 |
| | | 20/09/08 | 427763 | 6151 |
| | | 22/09/08 | 427771 | 968 |
| | | 15/10/08 | 427785 | 886 |

| | | | | |
|---|---|---|---|---|
| | | | 427787 | 2874 |
| | | 08/11/08 | 427501 | 978 |
| | | 24/12/08 | 427516 | 1720 |
| | | 15/01/09 | 427529 | 783 |
| | | 22/01/09 | 427530 | 1407 |
| | | 16/02/09 | 427544 | 228 |
| | | | 427545 | 2238 |
| | | 06/03/09 | 427559 | 368 |
| | | | 427560 | 1583 |
| | | 20/04/09 | 427578 | 967 |
| | | 28/04/09 | 427579 | 2319 |
| | | 25/05/09 | 428005 | 365 |
| | | 01/07/09 | 428020 | 2369 |
| | | 02/07/09 | 428022 | 1800 |
| | | 13/07/09 | 428034 | 518 |
| | | | 428035 | 2518 |
| | | 13/08/09 | 428053 | 1046 |
| | | 24/08/09 | 428054 | 3668 |
| | | 15/10/09 | 428089 | 1049 |
| | | | 428091 | 3122 |
| | | 26/10/09 | 428094 | 1542 |
| | | 30/11/09 | 995587 | 795 |
| | | 16/12/09 | 995621 | 638 |
| | | | 995622 | 1687 |
| | | 29/12/09 | 995624 | 10000 |
| | | 13/01/10 | 995640 | 1530 |
| | | 17/02/10 | 995656 | 1562 |
| | | 10/03/10 | 995670 | 214000 |
| | | 13/04/10 | 995699 | 15000 |
| | | 19/04/10 | 995700 | 4282 |
| | | 21/04/10 | 423176 | 1181 |
| | | 11/05/10 | 423190 | 2400 |
| | | | 423191 | 2532 |
| | | 21/06/10 | 423206 | 550 |

BD/2872/16



| | | | | |
|---|---|---|---|---|
| | | 24/06/10 | 423207 | 1601 |
| | | 06/07/10 | 423218 | 390 |
| | | 22/07/10 | 423220 | 727 |
| | | 14/08/10 | 423734 | 952 |
| | | 18/08/10 | 423736 | 1993 |
| | | 18/10/10 | 423674 | 861 |
| | | 30/10/10 | 423676 | 2924 |
| | | 16/12/10 | 423702 | 748 |
| | | | 423703 | 1000 |
| | | 20/12/10 | 423708 | 845 |
| | | 13/01/11 | 423722 | 352 |
| | | 22/02/11 | 376514 | 673 |
| | | | 376530 | 257 |
| | | 23/04/11 | 376546 | 571 |
| | | 02/05/11 | 376547 | 480 |
| | | 20/06/11 | 376578 | 1445 |
| | | | 376579 | 719 |
| | | 30/06/11 | 376584 | 2000 |
| | | 25/07/11 | 376598 | 3047 |
| | | 26/07/11 | 376597 | 167 |
| | | | 533801 | 6000 |
| | | 23/08/11 | 533814 | 312 |
| | | | 533815 | 339 |
| | | 22/09/11 | 533830 | 386 |
| | | 15/10/11 | 533844 | 2480 |
| | | | 533845 | 1815 |
| | | 24/10/11 | 533846 | 479 |
| | | 19/11/11 | 533863 | 292 |
| | | 30/11/11 | 533874 | 1381 |
| | | 22/12/11 | 533876 | 1030 |
| | | | 533877 | 488 |
| | | 28/12/11 | 533880 | 2710 |
| | | 16/01/12 | 533895 | 874 |
| | | 21/02/12 | 428610 | 2493 |

| | | | | |
|---|---|---|---|---|
| | | | 428609 | 110 |
| | | 14/04/12 | 428635 | 2704 |
| | | 11/06/12 | Trf. | 3505 |
| | | 23/06/12 | 428659 | 5335 |
| | | | 428660 | 416 |
| | | 01/08/12 | 428678 | 5054 |
| | | 27/08/12 | 428696 | 480 |
| | | | 428695 | 3593 |
| | | 25/09/12 | 425870 | 3203 |
| | | 06/11/12 | 425896 | 48400 |
| | | 08/12/12 | 947504 | 6808 |
| | | 27/12/12 | 947523 | 4521 |
| | | | 947524 | 507 |
| | | 16/02/15 | 730221 | 48400 |
| | | | 730228 | 2500 |
| ಒಟ್ಟು ಮೊತ್ತ | | | | 925946 |
| 3 | ಶ್ರೀ.ಜಿ.ವೆಂಕಟೇಶ್, ಡಿ–ದರ್ಜೆ ನೌಕರರು (ಎರಡೂ ದೂರುಗಳಲ್ಲಿನ ಎದುರುದಾರರು) | 20/09/08 | 427764 | 4627 |
| | | 16/07/09 | 428021 | 1500 |
| | | 09/02/10 | 995652 | 1000 |
| | | 25/11/10 | 423688 | 1146 |
| | | 27/12/11 | 533878 | 1000 |
| | | 14/07/12 | 428673 | 1500 |
| | | 27/08/12 | 425855 | 2851 |
| | | 25/09/12 | 425871 | 2547 |
| | | 02/02/13 | 947540 | 8000 |
| | | 04/03/13 | 947561 | 1100 |
| | | 08/04/13 | 947573 | 48400 |
| | | 30/04/13 | 947582 | 6460 |
| | | | 947583 | 6771 |
| | | 08/06/13 | 947600 | 48400 |
| | | 08/07/13 | 949915 | 48400 |
| | | | 949922 | 4006 |
| | | 22/07/13 | 949924 | 192780 |
| | | 27/09/13 | 949964 | 4500 |

BD/2872/16



| | | | | |
|---|---|---|---|---|
| | | | 949963 | 10000 |
| | | 05/12/13 | 950701 | 48400 |
| | | 06/01/14 | 950721 | 48400 |
| | | 12/03/14 | 950784 | 3418 |
| | | 28/03/14 | 950793 | 1000 |
| | | 29/04/14 | 952816 | 5000 |
| | | 16/02/15 | 730205 | 1570 |
| | | | 730207 | 670 |
| | | | 730208 | 510 |
| ಒಟ್ಟು ಮೊತ್ತ | | | | 503956.00 |
| 4 | ಶ್ರೀ.ಜಿ.ನರಸಿಂಹಮೂರ್ತಿ, ನಿವೃತ್ತ ಪ್ರಧಾನ ಅರ್ಚಕರು (ಎರಡೂ ದೂರುಗಳಲ್ಲಿನ ಎದುರುದಾರರು) | 14/02/07 | 809677 | 14410 |
| | | 28/04/07 | 809697 | 5200 |
| | | 25/07/07 | 804034 | 2405 |
| | | 16/08/07 | 804045 | 5200 |
| | | 28/10/07 | 804073 | 7800 |
| | | 11/11/07 | 804090 | 1700 |
| | | 11/12/07 | 427108 | 5200 |
| | | 13/04/08 | 427177 | 9551 |
| | | | 427178 | 10300 |
| | | 02/09/08 | 427746 | 9461 |
| | | 17/12/08 | 427514 | 14664 |
| | | 16/02/09 | 427543 | 7332 |
| | | 28/04/09 | 427581 | 7332 |
| | | 15/07/09 | 428036 | 12498 |
| | | 13/08/09 | 428052 | 5816 |
| | | 29/09/09 | 428075 | 6566 |
| | | 21/10/09 | 428088 | 5566 |
| | | 01/12/09 | 995586 | 4416 |
| | | 13/01/10 | 995639 | 16532 |
| | | 09/03/10 | 995669 | 6000 |
| | | 31/03/10 | 995678 | 8582 |
| | | 22/07/10 | 423219 | 8332 |
| | | 20/09/10 | 423651 | 25000 |
| | | 04/10/10 | 423670 | 8332 |

| | | | | |
|---|---|---|---|---|
| | | 05/01/11 | 423709 | 8332 |
| | | 02/02/11 | 376509 | 16032 |
| | | 24/02/11 | 376511 | 1900 |
| | | 21/03/11 | 376526 | 8332 |
| | | 02/06/11 | 376564 | 9482 |
| | | 24/09/11 | 533831 | 29300 |
| | | 21/11/11 | 533862 | 16350 |
| | | 01/02/12 | 533896 | 13900 |
| | | 06/03/12 | 428611 | 26150 |
| | | | 428612 | 15000 |
| | | 23/06/12 | 428658 | 20050 |
| | | 27/08/12 | 428697 | 6925 |
| | | 03/09/12 | 425854 | 15650 |
| | | | 425853 | 5000 |
| | | 06/12/12 | 949507 | 22800 |
| | | 20/12/12 | FT | 22800 |
| | | 08/01/13 | 947535 | 10000 |
| | | 11/02/13 | 947557 | 34350 |
| | | 02/07/13 | 949911 | 32250 |
| | | 14/09/13 | 941159 | 16950 |
| | | 19/09/13 | 949959 | 16950 |
| | | 02/01/14 | 950711 | 19350 |
| | | 15/02/14 | 950759 | 20000 |
| | | 03/04/14 | 950792 | 59000 |
| | | | 950794 | 16500 |
| | | 30/04/14 | 952810 | 19350 |
| | | 27/11/14 | 951970 | 1425 |
| | | 21/02/15 | 730211 | 38700 |
| | ಒಟ್ಟು ಮೊತ್ತ | | | 731023 |
| 5 | ಶ್ರೀ.ಜಿ.ತ್ಯಾಗರಾಜು, ಭಜಂತ್ರಿ ನೌಕರ (2 ದೂರುಗಳಲ್ಲಿನ ಎದುರುದಾರರು) | 15/10/09 | 428090 | 16000 |
| | | 18/06/11 | 376577 | 12000 |
| | ಒಟ್ಟು ಮೊತ್ತ | | | 28000 |
| 6 | ಶ್ರೀ.ಎ.ರಾಜು (ಪೇಷ್ಕಾರ್) | 03/02/07 | 809675 | 1000 |

BD/2872/16



| | | | | |
|---|---|---|---|---|
| | [ಎರಡೂ ದೂರುಗಳಲ್ಲಿನ ಎದುರುದಾರರು] | 22/02/07 | 809681 | 20985 |
| | | 06/11/07 | 804075 | 7815 |
| | | 26/03/08 | 427156 | 133000 |
| | | 04/08/08 | 427727 | 27000 |
| | | 04/09/08 | 427760 | 11967 |
| | | 31/12/08 | 427517 | 10000 |
| | | 21/03/09 | 427561 | 90000 |
| | | 13/07/09 | 428033 | 1689 |
| ಒಟ್ಟು ಮೊತ್ತ | | | | 303456 |

2) ಕ್ರಮವಾಗಿ, ಎರಡೂ ದೂರುಗಳಲ್ಲಿನ ಒಂದು (1) ಮತ್ತು 2ನೇ ಎದುರುದಾರರು – ಶ್ರೀಮತಿ.ಜಿ.ಪದ್ಮಾವತಿ ರವರ ಹೆಸರಿನಲ್ಲಿ ಒಟ್ಟು ₹39,76,276/–; ಎರಡು (2) ಮತ್ತು 3ನೇ ಎದುರುದಾರರು – ಶ್ರೀ.ಜಿ.ಗೋವಿಂದಪ್ಪ ರವರ ಹೆಸರಿನಲ್ಲಿ ಒಟ್ಟು ₹9,25,946/–; 3 ಮತ್ತು 4ನೇ ಎದುರುದಾರರು – ಶ್ರೀ.ಜಿ.ವೆಂಕಟೇಶ್, ರವರ ಹೆಸರಿನಲ್ಲಿ ಒಟ್ಟು ₹5,30,956/–; 4 ಮತ್ತು 5ನೇ ಎದುರುದಾರರು – ಶ್ರೀ.ಜಿ.ನರಸಿಂಹಮೂರ್ತಿ ರವರ ಹೆಸರಿನಲ್ಲಿ ಒಟ್ಟು ₹7,31,023/–; 5 ಮತ್ತು 6ನೇ ಎದುರುದಾರರು – ಶ್ರೀ.ಜಿ.ತ್ಯಾಗರಾಜು ರವರ ಹೆಸರಿನಲ್ಲಿ ಒಟ್ಟು ₹28,000/– ಹಾಗೂ 7 ಮತ್ತು 8ನೇ ಎದುರುದಾರರು – ಶ್ರೀ.ಎ.ರಾಜು ರವರ ಹೆಸರಿನಲ್ಲಿ ಒಟ್ಟು ₹3,03,456/– ಗಳನ್ನು ಚೆಕ್‌ಗಳ ಮುಖೇನ ನೀಡಿರುವುದು ಕಂಡು ಬಂದಿದೆ. ಸದರಿ ಎದುರುದಾರರುಗಳು ತಮ್ಮ ತಮ್ಮ ಹೆಸರುಗಳಿಗೆ ನೀಡಲಾದ ಚೆಕ್‌ಗಳ ಮೂಲಕ ಹಣವನ್ನು ಬ್ಯಾಂಕಿನಿಂದ ಪಡೆದು ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಎರಡೂ ದೂರುಗಳಲ್ಲಿನ 6 ಮತ್ತು 7ನೇ ಎದುರುದಾರರು – ಶ್ರೀ.ಸೋಮಶೇಖರ ರವರ ಕರ್ತವ್ಯದ ಅವಧಿ (ಫೆಬ್ರವರಿ, 2013 ರಿಂದ) ಯಲ್ಲೂ ಹಣ ದುರುಪಯೋಗ ಕಂಡು ಬಂದಿದೆ;

3) ದಿನಾಂಕ:24/11/08ರಂದು ಚೆಕ್ ಸಂಖ್ಯೆ:427800ರಲ್ಲಿ ₹1 ಲಕ್ಷವನ್ನು ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದ ಸುತ್ತಲೂ ಕಾಂಪೌಂಡ್ ಗೋಡೆ (ಗ್ರಿಲ್ ಮಾದರಿ) ಕಾಮಗಾರಿ ನಿರ್ವಹಿಸಲು ಕೋಲಾರ ವಿಭಾಗದ ಕಾರ್ಯಪಾಲಕ ಅಭಿಯಂತರರಿಗೆ ನೀಡಿರುವುದು ದಿನಾಂಕ:09/07/15ರಂದು ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಯವರು ಕೋಲಾರ ಉಪವಿಭಾಗದ ಉಪವಿಭಾಗಾಧಿಕಾರಿಗಳಿಗೆ ನೀಡಿದ ಮಾಹಿತಿ ಪತ್ರದಲ್ಲಿ ಕಂಡು ಬರುವುದಲ್ಲದೇ, ಬ್ಯಾಂಕ್ ತಃಖ್ತೆಯಲ್ಲೂ ಕಂಡು ಬಂದಿದೆ. ಆದರೆ, ಅದೇ ಕಾಮಗಾರಿಗೆ ದಿನಾಂಕ:29/08/09ರಂದು ಚೆಕ್ ಸಂಖ್ಯೆ:428055ರಲ್ಲಿ ₹1,74,824/–ಗಳನ್ನು ಶ್ರೀ.ಜಿ.ಆರ್.ಜಗದೀಶ್ ರವರಿಗೆ ನೀಡಿರುವುದು ಕಂಡು ಬಂದಿದೆ. ಒಂದೇ ಕಾಮಗಾರಿಗೆ ಎರಡೆರಡು ಬಾರಿ ಹಣ ವ್ಯಯಿಸಿರುವುದು ಕಂಡು ಬರುವುದಲ್ಲದೆ, ಸದರಿ ಕಾಮಗಾರಿಗಳ ನಿರ್ವಹಣೆ ಮಾಡಲು ಕೆಟಿಪಿಪಿ ಕಾಯಿದೆ ಅಡಿ ಟೆಂಡರ್ ಕರೆದ ಬಗ್ಗೆಯಾಗಲೀ, ಕಾಮಗಾರಿ ನಿರ್ವಹಣೆ ಮಾಡಿದ ಬಾಬ್ತು, ಇನ್ನಿತರೆ ದಾಖಲೆಯಾಗಲೀ ಇಲ್ಲ;

4) ಮುಂದುವರೆದು, ತೆಂಗಿನಕಾಯಿ ಫ್ಲಾಟ್‌ಫಾರಂ ನಿರ್ಮಾಣ ಕಾಮಗಾರಿ \ ರಿಪೇರಿ ಕಾಮಗಾರಿಗಳಿಗೆ ದಿನಾಂಕ:19/07/07, 12/03/08, 17/05/08 ಮತ್ತು 06/09/08ರಂದು ಕ್ರಮವಾಗಿ, ₹12,600/–, ₹1,00,000/–, ₹1,83,019/– ಮತ್ತು ₹99,429/–ಗಳಿಗೆ 4 ಚೆಕ್‌ಗಳನ್ನು ಗುತ್ತಿಗೆದಾರರಾದ ಶ್ರೀ.ಜಿ.ಆರ್.ಜಗದೀಶ್ ರವರಿಗೆ ನೀಡಿರುವುದು ಬ್ಯಾಂಕ್ ಲೆಕ್ಕ ತಃಖ್ತೆಯಲ್ಲಿ ಕಂಡು ಬಂದಿದ್ದು, ಸದರಿ ದೇವಸ್ಥಾನದ ತೆಂಗಿನಕಾಯಿ ಫ್ಲಾಟ್‌ಪಾರಂ ನಿರ್ಮಾಣ ಕಾಮಗಾರಿ \ ರಿಪೇರಿ ಕಾಮಗಾರಿಯನ್ನು ಶ್ರೀಮತಿ.ಆರ್.ಪ್ರತಿಭಾ ಮತ್ತು ಶ್ರೀ.ಆರ್.ಸುರೇಂದ್ರ ಕುಮಾರ್, ಶ್ರೀ ವಿನಾಯಕ ಮೆಡಿಕಲ್ಸ್, ಹೊಸಕೋಟೆ ರವರು ಮಾಡಿಸಿದ್ದಾರೆಂದು ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿಗಳೇ ದೂರುದಾರರಿಗೆ ದಿ:20/01/16ರ ಪತ್ರದಲ್ಲಿ ಮಾಹಿತಿ ಹಕ್ಕು ಕಾಯಿದೆ ಅಡಿ ಮಾಹಿತಿಯನ್ನು ನೀಡಿದ್ದಾರೆ. ಅಂದರೆ, ಖಾಸಗಿ ವ್ಯಕ್ತಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಮಾಡಿದ ಕಾಮಗಾರಿಗಳ ಬಾಬ್ತು ದೇವಸ್ಥಾನದ ಖಾತೆಯಿಂದ ಗುತ್ತಿಗೆದಾರರಿಗೆ ಚೆಕ್‌ಗಳನ್ನು ನೀಡಿ, ಒಟ್ಟು ₹3,95,048/–ಗಳನ್ನು ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

5) ಮೇಲೆ ಹೇಳಿದ 5 ಚೆಕ್‌ಗಳು ಮಾತ್ರವಲ್ಲದೇ, ಶ್ರೀ.ಜಗದೀಶ್ ಎಂಬ ವ್ಯಕ್ತಿಯ ಹೆಸರಿಗೆ ದಿನಾಂಕ:31/01/07ರಂದು ₹1,30,000/– (ಚೆಕ್ ನಂ.809664), 08/05/07ರಂದು ₹4,800/– (ಚೆಕ್ ನಂ.804006), 16/06/07ರಂದು ₹1,87,133/– (ಚೆಕ್ ನಂ.804020), 18/08/07ರಂದು ₹10,000/– (ಚೆಕ್ ನಂ.804050), 16/09/07ರಂದು ₹2,26,555/– (ಚೆಕ್ ನಂ.804058), 29/12/07ರಂದು ₹15,050/–, ₹2,000/– ಮತ್ತು ₹500/– (ಚೆಕ್ ನಂ.427111, 427112 ಮತ್ತು 427113), 02/02/08 ರಂದು ₹7,000/– (ಚೆಕ್ ನಂ.427127), 05/02/08 ರಂದು ₹1,32,229/– (ಚೆಕ್ ನಂ.427126), 30/03/08 ರಂದು ₹8,000/– (ಚೆಕ್ ನಂ.427159) ಮತ್ತು 23/10/08 ರಂದು ₹16,475/– (ಚೆಕ್ ನಂ.427788)ಗಳನ್ನು ನೀಡಲಾಗಿದೆಯೆಂದು ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿಗಳೇ ದೂರುದಾರರಿಗೆ ದಿ:26/06/15ರ ಪತ್ರದಲ್ಲಿ ಮಾಹಿತಿ ಹಕ್ಕು ಕಾಯಿದೆ ಅಡಿ ಮಾಹಿತಿಯನ್ನು ನೀಡಿದ್ದಾರೆ.

7. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

8. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ರಿಂದ 7ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

9. ಎರಡೂ ದೂರುಗಳಲ್ಲಿನ 4, 5 ಮತ್ತು 5, 6ನೇ ಎದುರುದಾರರುಗಳಾದ ಕ್ರಮವಾಗಿ, ನಿವೃತ್ತ ಪ್ರಧಾನ ಅರ್ಚಕರು ಹಾಗೂ ಡೋಲು ಭಜಂತ್ರಿಯಾಗಿದ್ದು, ಸದರಿಯವರುಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ, ಖಂಡಿಕೆ–6(2)ರಲ್ಲಿ ಹೇಳಿದ ದುರುಪಯೋಗದ ಮೊತ್ತವನ್ನು ವಸೂಲಿ ಮಾಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

10. ಅದಲ್ಲದೆ, 1 ರಿಂದ 3, 6 ಮತ್ತು 7ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 7ನೇ ಎದುರುದಾರರು ದಿನಾಂಕ:30/04/2017ರಂದು ನಿವೃತ್ತಿ ಹೊಂದಿರುವುದರಿಂದ, **ಕೆಸಿಎಸ್‌ಆರ್ ನಿಯಮ 214(2)(ಬಿ)(i)ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು** ನೀಡಿ ಹಾಗೂ 1 ರಿಂದ 3, 6 ಮತ್ತು 7ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

11. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ, ಏಕೆಂದರೆ 7ನೇ ಎದುರುದಾರರು ದಿನಾಂಕ:30/04/2017ರಂದು ನಿವೃತ್ತಿ ಹೊಂದಿದ್ದಾರೆ.

(ನ್ಯಾಯಾಮೂರ್ತಿ ಎನ್.ಆನಂದ)
ಉಪಲೋಕಾಯುಕ್ತ,
ಕರ್ನಾಟಕ ರಾಜ್ಯ.